# ಗುರುತತ್ವ

ಸಾಕ್ಷಾತ ಸದ್ಗುರು ಪ್ರತ್ಯಕ್ಷವಾಗಲು
ಸ್ಥಿತಿಗತಿಗಳು ಕೇಳುವುದ್ಯಾಕೋ
ಆ ಕ್ಷಣಕ್ಕಾಗುವುದೋ ಅನಂತ ಸೌಖ್ಯವು
ಮೋಕ್ಷವ ಪಡಕೊಳ್ಳುವ ಕುದಿಯಾಕೋ||

ಕಡಕೋಳ ಮಡಿವಾಳಪ್ಪನವರ ಅಪರೂಪದ ತತ್ವಪದವೊಂದರ ಈ ಪಲ್ಲವಿ ಗುರು ಮಾರ್ಗಗಳ ತಾತ್ವಿಕ ಆಳವನ್ನು ಸಾಕ್ಷೀಕರಿಸುತ್ತದೆ. ಕಾಲ್ಪನಿಕ ದೇವರ ಅಸ್ತಿತ್ವವನ್ನು ನಿರಾಕರಿಸುವ ಗುರುಪಂಥಗಳಿಗೆ ಗುರುವೇ ಹರ–ಹರಿ–ಹಜರತ್ ಎಲ್ಲವೂ ಆಗಿರುತ್ತಾನೆ. ಅವರ ದೃಷ್ಟಿಯಲ್ಲಿ ಹರ ಮುನಿದರೆ ಗುರು ಕಾಯುತ್ತಾನೆ. ಆದರೆ ಗುರು ಮುನಿದರೆ ಹರ ಕಾಯಲಾರ. ಅಂದರೆ ಗುರುಪಂಥಗಳೊಂದಿಗೆ ಲಗತ್ತಾದವರಿಗೆ ಹರನೆಂಬ ದೇವರು ಬೇಕಾಗಿಲ್ಲ. ಮನುಷ್ಯ ಬಾಳಿಗೆ ದೇವರೆಂಬ ಕಲ್ಪಿತ ವಾಸ್ತವಗಳ ಅವಶ್ಯಕತೆ ಇಲ್ಲ. ದೇವರು ಇಲ್ಲ ಎಂದು ಹೇಳದೆ ದೇವರ ಇರುವಿಕೆಯನ್ನು ನಿರಾಕರಿಸುವ ರುಜು ಮಾರ್ಗವಿದು. ಇದನ್ನೆ ಮಡಿವಾಳಪ್ಪ ಇಲ್ಲಿ ಗುರುವೆಂಬ ವ್ಯಕ್ತಿ ಶಕ್ತಿಗಳು ಪ್ರತ್ಯಕ್ಷವಾಗಿಯೇ ನಮ್ಮೊಡನಿರುವಾಗ ಲೋಕ ದಂದುಗದ ಸ್ಥಿತಿ ಗತಿಗಳ ಕುರಿತು ಚಿಂತಿಸಬೇಕಿಲ್ಲ. ನಾಳೆ ಏನಾದೀತು? ಇಂದು ಏಕೆ ಹೀಗಿದೆ? ಮನುಷ್ಯರ ಬದುಕಿನ ದುಃಖ ದುಮ್ಮಾನಗಳ ಕಾರಣಗಳ ಕುರಿತು ವ್ಯಥೆ ಪಡಬೇಕಿಲ್ಲ. ಏಕೆಂದರೆ ಗುರು ಗಂಭೀರ ಎಲ್ಲದಕ್ಕೂ ಪರಿಹಾರವನ್ನು ಸೂಚಿಸುತ್ತಾನೆ. ಭವಸಾಗರದ ಅನಂತ ದುಃಖ ದುಮ್ಮಾನಗಳಿಂದ ಪಾರುಗಾಣಿಸುವ ಹಿಕ್ಮತ್ತು ಗುರುವಿಗಿದೆ. ಸಮರ್ಥ ಗುರುರಾಯ ಲೋಕ ಅಲೋಕಗಳ ಮತಿತಾರ್ಥವನ್ನು ಅರಿವಾಗಿಸಿ ಲೋಕದೊಳಗಿದ್ದೂ ಲೋಕಾತೀತವಾಗುವ ಬಗೆಯನ್ನು ಕರವಶ ಮಾಡಿಸುತ್ತಾನೆ. ಗುರುವಿನ ಕೃಪಾಕಟಾಕ್ಷದಲ್ಲಿ ವ್ಯಸ್ತವಾಗಿದ್ದರೆ ಸಾಕು ಅನಂತ ಸೌಖ್ಯಗಳು ಅಂದರೆ ಬದುಕಿನೆಲ್ಲ ಸಾರ್ಥಕ ಕ್ಷಣಗಳು ಅನುವಾಗುತ್ತವೆ. ಗುರು ಸನ್ನಿಧಿಯಲ್ಲಿ ಬಾಳು ಹೂಡಿದವರಿಗೆ ಬೇರೆ ಬಯಕೆಗಳ ತಹತಹವಿರುವುದಿಲ್ಲ. ಬೇಕೆಂಬ ಭವದ ಬೇರೊಂದು ನಶಿಸಿ ನಿತ್ಯತೃಪ್ತ ಭಾವವೊಂದು ತಾನೇ ತಾನಾಗಿ ವಿರಮಿಸುತ್ತದೆ.

ಲೋಕದ ಶಕ್ತಿ ಮತ್ತು ಮಿತಿಗಳ ಅರಿವಾದೊಡನೆ ಮನುಷ್ಯರು ತಾವಾಗಿಯೇ ಸೃಷ್ಟಿಸಿಕೊಂಡಿರುವ ಎಲ್ಲ ಭ್ರಮೆಗಳ ಒಸರು ಕಳೆದು ಹೋಗುತ್ತದೆ. ವಾಸ್ತವದಲ್ಲಿ ಇಲ್ಲದಿರುವ, ಆದರೆ ಸಂಕುಚಿತ ಸ್ವಾರ್ಥ ಮತ್ತು ದುರಾಸೆಯಿಂದಾಗಿ ಸೃಷ್ಟಿಸಿಕೊಂಡಿರುವ ಮನೋಸಂರಚನೆಗಳು ಹೇಳ ಹೆಸರಿಲ್ಲದಂತೆ ಮಾಯವಾಗುತ್ತವೆ. ಜಾತಿ, ಮತ, ಪಂಥ, ಲಿಂಗ, ವರ್ಗ, ವರ್ಣ ಇತ್ಯಾದಿ ಎಲ್ಲವೂ ಸಮಾಜೀಕರು ಸೃಷ್ಟಿಸಿಕೊಂಡಿರುವ ಅಮೂರ್ತ. ಆದರೆ ವಾಸ್ತವದಲ್ಲಿ ಆಚರಿಸುವ ವಿದ್ಯಮಾನಗಳೆ ಆಗಿವೆ ತಾನೇ? ಈ ಎಲ್ಲ ಭಾವನೆಗಳು ಹುಟ್ಟುವುದು ಮನುಷ್ಯರ ತಪ್ಪುಗ್ರಹಿಕೆಗಳಲ್ಲಿ ಮಾತ್ರ. ಇವು ಯಾವುವು ಗಾಳಿ, ನೀರು, ಬೆಂಕಿ, ಆಕಾಶ, ಮಣ್ಣಿನಂತೆ ಭೌತ ಭೂತಗಳಲ್ಲ. ಕೇವಲ ಮನೋರಚನೆಗಳು. ಇಂಥವುಗಳನ್ನು ಯಾರು ಸೃಷ್ಟಿಸಿದರು? ಏಕೆ ಸೃಷ್ಟಿಸಿದರು? ಇತ್ಯಾದಿ ಪ್ರಶ್ನೆಗಳ ಚರ್ಚೆ ಇನ್ನೊಂದು ಬಗೆ. ಅದಿರಲಿ. ಆದರೆ ಈ ಎಲ್ಲವುಗಳು ಭಾವವಾದಿ ಮನುಷ್ಯರ ಮನೋರಚನೆಗಳು ಮತ್ತು ಅವೇ ಆತ್ಮಘಾತುಕ ಎಂದರಿತೊಡನೆ ಮನುಷ್ಯರು ಅವುಗಳಿಂದ ವಿಮುಖರಾಗುತ್ತಾರೆ. ಇಂಥ ಎಲ್ಲ ಕೊಳೆ ಕಸದಿಂದ ವಿಮುಕ್ತರಾಗುವುದೇ ಮೋಕ್ಷದ ಸ್ಥಿತಿ. ಮೋಕ್ಷದ ದಾರಿಗೆ ಕರೆದೊಯ್ಯುವವನೆ ಗುರು. ಇಂಥ ಗುರು ದೊರಕಿದರೆ ಸಾಕು; ಸತ್ತ ಮೇಲೆ ಸಿಗುತ್ತದೆ ಎಂದು ನಂಬಿಸಲಾಗಿರುವ ಮೋಕ್ಷದ ಬಯಕೆ ಲುಪ್ತವಾಗುತ್ತದೆ. ದೈವ ಮಾರ್ಗಾವಲಂಬಿಗಳು ಬೋಧಿಸಿದ ಮರಣದ ನಂತರ ದೊರೆಯುವ ಮುಕ್ತಿ, ಸ್ವರ್ಗ, ನರಕ, ಪಾಪ, ಪುಣ್ಯಗಳ ಜಂಜಾಟವನ್ನು ಗುರುಮಾರ್ಗಿಗಳು ಒಪ್ಪುವುದಿಲ್ಲ. ಅದನ್ನೆ ಮಡಿವಾಳಪ್ಪ ಇಲ್ಲಿ ಮೋಕ್ಷವ ಪಡೆದುಕೊಳ್ಳುವ ಕುದಿ ಅಂದರೆ ಚಿಂತೆ ಮತ್ತೂ ಮುಂದುವರೆದು ಹೇಳುವುದಾದರೆ ವ್ಯಸನ ಬೇಕಿಲ್ಲ ಎಂದಿದ್ದಾನೆ.

ಗುರು ಮಾರ್ಗದಲ್ಲಿ ನಡೆಯುವವರಿಗೆ ಭೌತಿಕ ಬದುಕಿನ ದುಃಖ ದುಮ್ಮಾನಗಳ ಸೋಂಕು ಇಲ್ಲ. ಪರದ ಬಯಕೆ ಇಲ್ಲ. ಮರ್ತ್ಯಲೋಕವೆಂಬ ಕಮ್ಮಟದಲ್ಲಿ ಗಂಧವಾಗಿ ತೇದುಕೊಂಡು ಸುವಾಸನೆ ಬೀರಿ ಸಾರ್ಥಕಗೊಳ್ಳಬೇಕು. ಗುರುವಿನೊಂದಿಗೆ ಹೆಜ್ಜೆ ಹಾಕುತ್ತ ಗುರುವೇ ತಾನಾಗಬೇಕು. ಗುರು ಮುಟ್ಟಿ ಗುರುವಾಗುವ ಪ್ರಾಯೋಗಿಕ ಅದ್ವೈತಿಗಳು ಇವರು. 'ಅಂತಃಕರುಣೆ ನೋಡಮ್ಮ ಗುರುರಾಯ| ತನ್ನಂತೆ ಮಾಡಿದ ಎನ್ನ ಕಾಯ' ಹೌದು. ಗುರು ಶಿಷ್ಯನಿಗೆ ಪಥಿಕ ಮತ್ತು ಪರಮಾಪ್ತ ಸ್ನೇಹಿತ. ತತ್ವಪದಕಾರರು ನರರೂಪಿ ಗುರುವನ್ನು ಗಂಡನೆಂದು, ದೇವರು, ಗೆಳೆಯ, ಸಖ, ಬಂಧು, ತಂದೆ, ತಾಯಿ ಮುಂತಾಗಿ ಹಲವು ಬಗೆಯಲ್ಲಿ ಕಂಡು ತಣಿದಿದ್ದಾರೆ. ಮನುಷ್ಯರು ಸೃಷ್ಟಿಸಿಕೊಂಡಿರುವ ಎಲ್ಲ ಆಪ್ತ ಸಂಬಂಧವಾಚಕಗಳಲ್ಲಿ ಗುರುವನ್ನು ಇಟ್ಟು ಆನಂದ ತುಂದಲಿತರಾಗಿದ್ದಾರೆ. ಕವಿ ಸರ್ವಜ್ಞ 'ಬಂಧುಗಳಾದವರು ಬಂದುಂಡು ಹೋಗುವವರು| ಬಂಧನವ ಕಳೆಯಲರಿಯರು| ಗುರುವಿಂದ ಮತ್ತಧಿಕ ಬಂಧುಗಳುಂಟೆ' ಎಂದಿದ್ದಾನೆ. ಇದೇ ಮಾತನ್ನು ಮಡಿವಾಳಪ್ಪ ಇನ್ನೊಂದೆಡೆ 'ಗುರುವೇ ನೀ ಬೇಗನೆ ಮೊರೆ ಕೇಳೋ| ವ್ಯರ್ಥ ಹರಿದು ಹೋಗತೀನಿ ಹಿಡಕೋರೊ ಬೇಗ' ಎಂದು ಆರ್ತನಾದ ಮಾಡಿದ್ದಾರೆ ಮತ್ತೂ ಮುಂದುವರೆದು 'ಗುರುವೇ ನೀ ಹಾಕಿದಿ ಬಲಿಯೊಂದು| ಬೇರೆ ನಾ ಹಾಕಿಕೊಂಡೆ ಮತ್ತೊಂದು| ಬಂಧನ ಬಿಡಿಸೋ ನೀ ಬಂದು| ನಿನ್ನ ಹರ್ರು ಯಾರಿಲ್ಲೊ ಭಾಯಿ ಬಂಧು' ಎನ್ನುತ್ತಾನೆ.

ಉರ್ದುವಿನ 'ಭಾಯಿ' ಕನ್ನಡದಲ್ಲಿ ಸಹೋದರ. ಕಲ್ಯಾಣ ಕರ್ನಾಟಕದಲ್ಲಿ ಭಾಯಿ ಪದವನ್ನು ಅತ್ಯಂತ ಆಪ್ತವಾಗಿ ಸಾರ್ವತ್ರಿಕವಾಗಿ ಬಳಸಲಾಗುತ್ತದೆ. ತತ್ವಪದಗಳ ಒಟ್ಟು ಮೊತ್ತದಲ್ಲಿ ಸಿಂಹಪಾಲು ಗುರುತತ್ವ ವಿವರಣೆಗೆ ಮೀಸಲಾಗಿದೆ. ಆತ್ಯಂತಿಕವಾಗಿ 'ಗುರು' ಎನ್ನುವುದು ವಚನಕಾರರು ಹೇಳಿದ 'ಅರಿವೆ ಗುರು, ಆಚಾರವೇ ಲಿಂಗ, ಜ್ಞಾನವೇ ಜಂಗಮ' ಎಂಬ ಹಂತಕ್ಕೇರುತ್ತದೆ. ಇಲ್ಲಿ ನಿತ್ಯ ಸ್ವಾನುಭಾವದ ಚರ್ಚೆ ನಡೆಯುತ್ತದೆ. ಗುರುಶ್ರದ್ಧೆಯಲ್ಲಿ ಅಂಧಾನುಕರಣೆ ಅಥವಾ ವ್ಯಕ್ತಿ ವೈಭವಕ್ಕೆ ಆಸ್ಪದವಿಲ್ಲ. 'ಗುರುತ್ವ' ಎಂಬುದು ತತ್ವವಾಗಿ, ಅರಿವಿನ ಅನುಸಂಧಾನವಾಗಿ ನೆಲೆ ನಿಲ್ಲುತ್ತದೆ. ಹೀಗಾಗಿ ಗುರುಪಂಥಿಗಳು ದೇವರ ಹಂಗಿಗೆ ಬೀಳಲಿಲ್ಲ. ಅವರು ಆರಾಧಿಸುವುದು ಗುರು ಗದ್ದುಗೆಗಳನ್ನು ಮಾತ್ರ. ದೇವಸ್ಥಾನಗಳು ಅವರ ಶ್ರದ್ಧಾಕೇಂದ್ರಗಳಾಗಲಿಲ್ಲ. ಆದ್ದರಿಂದಲೆ ತತ್ವಪದಕಾರನೊಬ್ಬ 'ಶಿವ ನಿನ್ನಲಿ ಹಾನ ನೀ ನೋಡಿಲ್ಲ| ಎಲ್ಲಿ ಹುಡುಕಿದರಿಲ್ಲ ತಮ್ಮ ಎಲ್ಲೆಲ್ಲಿ ಇಲ್ಲ' ಎಂದು ತನ್ಮಯನಾಗಿ ಭಜನೆ ಗೋಷ್ಠಿಗಳಲ್ಲಿ ಹಾಡುತ್ತ ಸಹ ಸಾಧಕರಲ್ಲಿ ಅರಿವಿನ ಜ್ಯೋತಿ ಹೊತ್ತಿಸುತ್ತಾನೆ. ದೈವ ಭಯದಿಂದ ಮುಕ್ತವಾಗಿಸುತ್ತಾನೆ.

■ ಮೀನಾಕ್ಷಿ ಬಾಳಿ

## ಮಾತೇ ಮುತ್ತು

- ನನ್ನ ಅಜ್ಜ ಯಾರೆಂದು ನನಗೆ ಗೊತ್ತಿಲ್ಲ; ಆದರೆ ಆತನ ಮೊಮ್ಮಗ ಏನಾಗಬೇಕೆಂದು ನನಗೆ ಗೊತ್ತಿದೆ.

  —ಅಬ್ರಹಾಂ ಲಿಂಕನ್

- ಅದೃಷ್ಟ ಎನ್ನುವುದು ಪ್ರಯತ್ನವೆಂಬ ತಾಯಿಗೆ, ಅವಕಾಶವೆಂಬ ತಂದೆಗೆ ಜನಿಸುವ ಮಗು.

  —ಗುರುನಾನಕ್

- ಶಕ್ತಿ, ದೈಹಿಕ ಬಲದಿಂದ ಬರುವುದಿಲ್ಲ. ಅದು ಬರುವುದು ಅದಮ್ಯವಾದ ಇಚ್ಛಾಶಕ್ತಿಯಿಂದ.

  —ಮಹಾತ್ಮ ಗಾಂಧಿ

- ಹಸಿವನ್ನು ರೋಗವೆಂದು ತಿಳಿ. ರೋಗಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಆಹಾರವನ್ನು ಔಷಧದಂತೆ ಸೇವಿಸು.

  —ಶಂಕರಾಚಾರ್ಯ

- ಈ ಜಗತ್ತು ನಾವು ಹೇಳುವ ಸತ್ಯಕ್ಕಿಂತ ಮಿಗಿಲಾಗಿ ನಮ್ಮ ಕುರಿತು ಇತರರು ಹೇಳುವ ಸುಳ್ಳನ್ನು ನಂಬುತ್ತದೆ.

  —ಅಬ್ದುಲ್ ಕಲಾಂ

- ಸಂಪತ್ತಿಗಿಂತ ಜ್ಞಾನಕ್ಕೆ ಆದ್ಯತೆ ನೀಡಿ, ಏಕೆಂದರೆ ಒಂದು ಕ್ಷಣಿಕ; ಇನ್ನೊಂದು ಶಾಶ್ವತ.

  —ಸಾಕ್ರಟೀಸ್

- ಜಗತ್ತಿನಲ್ಲಿ ಹೇಳುವವರಿಗಿಂತ ಹೇಳಿದಂತೆ ನಡೆಯುವವರ ಯೋಗ್ಯತೆ ಅದೆಲ್ಲದಕ್ಕಿಂತ ಹೆಚ್ಚಿನದು.

  —ಗಳಗನಾಥ

- ಯಾವುದನುಭವದ ಸಹಜ ಕ್ರಾಂತಿಯೋ ಅದಾಗಲಿ ನನ್ನ ಕಲೆ.

  —ಕೆ.ಎಸ್. ನರಸಿಂಹ ಸ್ವಾಮಿ